# ಕರ್ನಾಟಕ ವಿಧಾನ ಪರಿಷತ್

| | |
|---|---|
| ಮಾನ್ಯ ಸದಸ್ಯರ ಹೆಸರು | : ಶ್ರೀ ಗೋವಿಂದ ರಾಜು |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 334 |
| ಉತ್ತರಿಸಬೇಕಾದ ದಿನಾಂಕ | : 10.12.2025 |
| ಉತ್ತರಿಸಬೇಕಾದ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಸತಿ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಎಷ್ಟು ವಸತಿ ಯೋಜನೆಗಳಿವೆ: (ಪೂರ್ಣ ವಿವರ ನೀಡುವುದು) | ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಈ ಕೆಳಕಂಡ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿವೆ.<br><br>ರಾಜ್ಯ ಪುರಸ್ಕೃತ ವಸತಿ ಯೋಜನೆಗಳು:<br>1. ಬಸವ ವಸತಿ ಯೋಜನೆ<br>2. ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ (ಗ್ರಾಮೀಣ & ನಗರ)<br>3. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ & ನಗರ)<br>4. ದೇವರಾಜು ಅರಸು ವಸತಿ ಯೋಜನೆ (ನೆರೆ ಸಂತ್ರಸ್ಥರ ಪುನರ್ ವಸತಿ-ಗ್ರಾಮೀಣ & ನಗರ)<br>5. ವಾಜಪೇಯಿ ನಗರ ವಸತಿ ಯೋಜನೆ<br>6. 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ (ಬೆಂಗಳೂರು ನಗರದಲ್ಲಿ ಮಾತ್ರ)<br><br>ಕೇಂದ್ರ ಪುರಸ್ಕೃತ ವಸತಿ ಯೋಜನೆಗಳು:<br>1. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)<br>2. ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)<br>3. PM-JANMAN |
| ಆ) | ರಾಜ್ಯದಲ್ಲಿ ಪ್ರಸ್ತುತ ಎಷ್ಟು ವಸತಿ ರಹಿತರಿದ್ದಾರೆ; ಇವರುಗಳಿಗೆ ವಸತಿ ನೀಡಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ; ಹಾಗೂ ಕಳೆದ 5 ವರ್ಷದಿಂದ ಎಷ್ಟು ವಸತಿಗಳನ್ನು ನೀಡಲಾಗಿದೆ; (ಯೋಜನೆವಾರು ವಿವರ). | ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 2018ರಲ್ಲಿ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ವಸತಿ/ನಿವೇಶನ ರಹಿತರ ಸಮೀಕ್ಷೆ ಹಾಗೂ 2017ರಲ್ಲಿ ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆಯಡಿ ನಗರ ಪ್ರದೇಶದಲ್ಲಿ ವಸತಿ/ನಿವೇಶನ ರಹಿತರ ಸಮೀಕ್ಷೆಯನ್ನು ಕೈಗೊಳ್ಳಲಾಗಿದ್ದು, ಸದರಿ ಸಮೀಕ್ಷೆಯಲ್ಲಿ ರಾಜ್ಯದಲ್ಲಿ ಒಟ್ಟು 3748766(ಗ್ರಾಮೀಣ-2418922 ಹಾಗೂ ನಗರ-1329844) ವಸತಿ ರಹಿತರು ಕಂಡು ಬಂದಿರುತ್ತಾರೆ. ವಿವರ ಈ ಕೆಳಕಂಡಂತಿದೆ.<br><br>ಪ್ರದೇಶ \| ನಿವೇಶರಹಿತರು \| ವಸತಿ ರಹಿತರು \| ಒಟ್ಟು ವಸತಿ ರಹಿತರು<br>ಗ್ರಾಮೀಣ \| 703976 \| 1714946 \| **2418922**<br>ನಗರ \| 1027657 \| 302187 \| **1329844**<br>**ಒಟ್ಟು** \| **1731633** \| **2017133** \| **3748766**<br><br>ಜಿಲ್ಲಾವಾರು ವಿವರ ಅನುಬಂಧ-1ರಲ್ಲಿ ಒದಗಿಸಲಾಗಿದ.<br><br>ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ನಿಗದಿಪಡಿಸಲಾಗುವ ಅನುದಾನಕ್ಕೆ ಅನುಗುಣವಾಗಿ ಅರ್ಹ ವಸತಿರಹಿತ ಕುಟುಂಬಗಳಿಗೆ ಹಂತ ಹಂತವಾಗಿ ವಸತಿ ಸೌಕರ್ಯವನ್ನು ಒದಗಿಸಲು ಕ್ರಮ ವಹಿಸಲಾಗುತ್ತಿದೆ.<br><br>2020-21 ರಿಂದ 2025-26ನೇ ಸಾಲಿನ ವರೆಗೆ ಒಟ್ಟು **8,98,426** ಮನೆಗಳನ್ನು ಮಂಜೂರು ಮಾಡಲಾಗಿರುತ್ತವೆ. ಯೋಜನಾವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |
| ಇ) | ಸರ್ಕಾರ ಪ್ರಸ್ತುತ ನೀಡುತ್ತಿರುವ ಸಹಾಯಧನದಿಂದ ಮನೆಯನ್ನು ಕಟ್ಟಿಕೊಳ್ಳಲು ಸಾಧ್ಯವೇ ಎಂಬುದನ್ನು ಸರ್ಕಾರ ಅವಲೋಕಿಸಿದೆಯೆ; ಅನುದಾನ ಪರಿಷ್ಕರಣೆಗೆ ತೆಗೆದುಕೊಂಡ ಕ್ರಮವೇನು; | ವಸತಿ ರಹಿತ ಬಡ ಕುಟುಂಬಗಳಿಗೆ ವಸತಿ ಸೌಕರ್ಯ ಒದಗಿಸಲು ಸರ್ಕಾರದಿಂದ ಮನೆ ನಿರ್ಮಾಣಕ್ಕೆ ಸಹಾಯಧನ ಮೊತ್ತವನ್ನು ಮಾತ್ರ ನೀಡಲಾಗುತ್ತಿದೆ. ಸರ್ಕಾರದಿಂದ ನೀಡಲಾಗುವ ಸಹಾಯ ಧನದೊಂದಿಗೆ ಫಲಾನುಭವಿಗಳು ತಮ್ಮ ವಂತಿಕೆ ಮೊತ್ತವನ್ನು ಸೇರಿಸಿ ತಮ್ಮ ಇಚ್ಛೆಗೆ ಅನುಗುಣವಾಗಿ ಮನೆ ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ.<br><br>ವಿವಿಧ ವಸತಿ ಯೋಜನೆಯಡಿ ನೀಡಲಾಗುತ್ತಿರುವ ಸಹಾಯಧನವನ್ನು ಪರಿಷ್ಕರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

| | | |
|---|---|---|
| ಈ) | ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ವಸತಿ ಯೋಜನೆಗಳಿಗೆ ಫಲಾನುಭವಿಗಳು ಮುಂದೆ ಬರುತ್ತಿಲ್ಲದಿರುವುದು ನಿಜವೇ; ಇದಕ್ಕೆ ಕಾರಣವೇನು, ಮತ್ತು ಸರ್ಕಾರದ ಗುರಿಯಂತೆ ಸಾಧನೆ ಮಾಡಲಾಗಿದೆಯೇ? | **ರಾಜ್ಯ ವಸತಿ ಯೋಜನೆಗೆ ಸಂಬಂಧಿಸಿದಂತೆ:**<br><br>ಸರ್ಕಾರದ ಮನೆ ಮಾರ್ಗಸೂಚಿಯನ್ವಯ ಕಾಮಗಾರಿ ಆದೇಶ ನೀಡಿದ 90 ದಿನಗಳೊಳಗಾಗಿ ಫಲಾನುಭವಿಯು ಮನೆಯ ಕಾಮಗಾರಿಯನ್ನು ಪ್ರಾರಂಭಿಸಬೇಕಿದ್ದು, ಒಂದು ವರ್ಷದೊಳಗಾಗಿ ಮನೆಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಮನೆಗಳ ನಿರ್ಮಾಣವನ್ನು ಫಲಾನುಭವಿಗಳೇ ಸ್ವತಃ ನಿರ್ಮಿಸಿಕೊಳ್ಳುತ್ತಿದ್ದು, ಮನೆಗಳ ನಿರ್ಮಾಣ ಹಂತದಲ್ಲಿ ಇರುವ ಮನೆಗಳ ಫಲಾನುಭವಿಗಳಿಗೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ನಗರ ಸ್ಥಳೀಯ ಅಧಿಕಾರಿಗಳ ಮುಖಾಂತರ ತಿಳುವಳಿಕೆ ಪತ್ರಗಳನ್ನು ನೀಡಿ ಹಾಗೂ ನೋಟೀಸ್ ಜಾರಿ ಮಾಡಿ ಶೀಘ್ರವಾಗಿ ಮನೆಗಳನ್ನು ನಿರ್ಮಿಸಿಕೊಳ್ಳಲು ಮನವೊಲಿಸಿ ಮನೆಯನ್ನು ಪೂರ್ಣಗೊಳಿಸಿಕೊಳ್ಳಲು ಸೂಚನೆ ನೀಡಲಾಗುತ್ತಿದೆ.<br><br>ರಾಜ್ಯ ಸರ್ಕಾರದ ಯೋಜನೆಯಡಿ ಪ.ಜಾತಿ /ಪಂಗಡದ ಫಲಾನುಭವಿಗಳಿಗೆ ರೂ. 2.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದ್ದು, ಕೇಂದ್ರ ಸರ್ಕಾರದ ಯೋಜನೆಯಡಿ ರೂ. 1.75 ಲಕ್ಷ ಸಹಾಯಧನವನ್ನು ನೀಡಲಾಗುತ್ತಿದೆ. ಹಾಗೂ ಈ ಹಿಂದೆ ನೆರೆ ಸಂತ್ರಸ್ತ ವಸತಿ ಯೋಜನೆಯಡಿ ಪ್ರತಿ ಮನೆಗೆ ರೂ. 3.00 ಲಕ್ಷದಿಂದ ರೂ. 5.00 ಲಕ್ಷದವರೆಗೆ ಸಹಾಯಧನವನ್ನು ಒದಗಿಸಿದ್ದು, ಫಲಾನುಭವಿಗಳು / ವಸತಿರಹಿತರು ಅನುದಾನ ಹೆಚ್ಚಳಕ್ಕೆ ಆಸಕ್ತಿಯನ್ನು ತೋರುತ್ತಿದ್ದಾರೆ.<br><br>**ಕೇಂದ್ರ ವಸತಿ ಯೋಜನೆ – ಪ್ರಧಾನ ಮಂತ್ರಿ ಅವಾಸ್ ಯೋಜನೆ (ಗ್ರಾಮೀಣ) ಗೆ ಸಂಬಂದಿಸಿದಂತೆ:**<br><br>ಪ್ರಧಾನ ಮಂತ್ರಿ ಅವಾಸ್ ಯೋಜನೆ (ಗ್ರಾಮೀಣ) ಅಡಿ 2024-25 ನೇ ಸಾಲಿಗೆ 7,02,731 ಮನೆಗಳ (ಪ.ಜಾ/ಪಂಗಡ – 1,50,310; ಸಾಮಾನ್ಯ – 5,52,421) ಗುರಿಯನ್ನು ನೀಡಿರುತ್ತದೆ. ದಿನಾಂಕ 25.11.2025 ರಲ್ಲಿದ್ದಂತೆ 3,12,392 ಫಲಾನುಭವಿಗಳ ಮಂಜೂರಾತಿಯಾಗಿರುತ್ತದೆ ಅಂದರೆ ಶೇ. 44 ರಷ್ಟು ಪ್ರಗತಿ ಸಾಧಿಸಲಾಗಿದೆ.<br><br>ಮನೆಗಳ ಮಂಜೂರಾತಿಗೆ ಸಂಬಂಧಿಸಿದಂತೆ, ಮನೆಗಳನ್ನು ಮಂಜೂರು ಮಾಡುವಾಗ Permanent Waiting List (PWL) ನಿಂದ ಆದ್ಯತೆಯ ಸಂಖ್ಯೆಯ ಪ್ರಕಾರ ಕ್ರಮಾಂಕವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗಿರುತ್ತದೆ.<br><br>ಅವಾಸಾಫ್ಟ್‌ನಲ್ಲಿ, ಆದ್ಯತೆಯ ಪಟ್ಟಿಯಲ್ಲಿ ನಿವೇಶನರಹಿತರಿಗೆ ಮೊದಲನೇ ಆದ್ಯತೆಯನ್ನು ನೀಡಿದ್ದು, ಆದ್ಯತೆಪಟ್ಟಿ ನಿವೇಶನರಹಿತರಿಂದ ಪ್ರಾರಂಭವಾಗುತ್ತದೆ. ಅವಾಸಾಫ್ಟ್ ದತ್ತಾಂಶದ ಪ್ರಕಾರ ಸುಮಾರು 1.50 ಲಕ್ಷ ನಿವೇಶನರಹಿತರು ಆದ್ಯತೆಪಟ್ಟಿಯಲ್ಲಿದ್ದಾರೆ. ಆದ್ಯತೆಯ ಸಂಖ್ಯೆಯ ಕ್ರಮಾಂಕವಾಗಿ ಆಯ್ಕೆ ಮಾಡಬೇಕಾದಾಗ ನಿವೇಶನರಹಿತರಿಗೆ ಮನೆ ನಿರ್ಮಿಸಲು ನಿವೇಶನವಿಲ್ಲದಿದ್ದರೂ ಸಹ ಕಡ್ಡಾಯವಾಗಿ ಮಂಜೂರಾತಿ ನೀಡಬೇಕಾಗುತ್ತದೆ. ನಿವೇಶನರಹಿತರಿಗೆ ಮನೆ ಮಂಜೂರು ಮಾಡಿದ್ದಲ್ಲಿ ನಿವೇಶನಲಭ್ಯವಿಲ್ಲದೇ ಅವು unstarted ಮನೆಗಳಾಗಿ ಉಳಿಯುತ್ತವೆ. ಮುಂದುವರೆದು, ಪರಿಶೀಲನಾ ಸಭೆಗಳಲ್ಲಿ ಕ್ಷೇತ್ರ ಅನುಷ್ಠಾನಾಧಿಕಾರಿಗಳಿಂದ ತಿಳಿದುಬಂದಿರುವ ಪ್ರಕಾರ ಆದ್ಯತೆಯಲ್ಲಿರುವ ಕೆಲವು ವ್ಯಕ್ತಿಗಳು ಪ್ರಸಕ್ತ ವರ್ಷದಲ್ಲಿ ಆರ್ಥಿಕ / ತಮ್ಮದೇ ಆದ ವೈಯಕ್ತಿಕ ಕಾರಣಗಳಿಂದ ಅಥವಾ ನಿವೇಶನದ ಕಾನೂನು ಸಮಸ್ಯೆಯಿಂದಾಗಿ ಮನೆ ನಿರ್ಮಿಸಲು ಇಚ್ಛಿಸುತ್ತಿಲ್ಲ. ಕೇಂದ್ರ ಸರ್ಕಾರದ ತಂತ್ರಾಂಶದನ್ವಯ ಕ್ರಮಾಂಕದಲ್ಲಿರುವರಿಗೆ ಒಂದು ಮಂಜೂರಾತಿಯನ್ನು ನೀಡಬೇಕು ಅಥವಾ ಅವರನ್ನು ಪಟ್ಟಿಯಿಂದ ರದ್ದುಗೊಳಿಸಬೇಕು. ತದನಂತರವೇ next in que ನಲ್ಲಿರುವವರಿಗೆ ಮನೆ ಮಂಜೂರಾತಿಯನ್ನು ನೀಡಬಹುದಾಗಿರುತ್ತದೆ.<br><br>ಕೇಂದ್ರ ಸರ್ಕಾರದ ನಿರ್ದೇಶನಗಳ ಪ್ರಕಾರ, ಪ್ರಸ್ತುತ ಮನೆ ನಿರ್ಮಿಸಲು ಆಸಕ್ತಿ ಇಲ್ಲದ ಮತ್ತು ನಿವೇಶನರಹಿತ ಅರ್ಜಿದಾರರನ್ನು ರದ್ದುಗೊಳಿಸಿ (Remand) PWL ನಲ್ಲಿ ಮುಂದಿನ ವ್ಯಕ್ತಿಗೆ ಮಂಜೂರಾತಿ ಮಾಡಲು ಜಿಲ್ಲೆಗಳಿಗೆ ನಿರ್ದೇಶಿಸಲಾಗಿದೆ. ಪ್ರಸ್ತುತ ಮನೆ ನಿರ್ಮಿಸಲು ಆಸಕ್ತಿ ಇಲ್ಲದ ಮತ್ತು ನಿವೇಶನರಹಿತ ವ್ಯಕ್ತಿಗಳು ರದ್ದುಗೊಳಿಸಲು ಸದರಿ ವ್ಯಕ್ತಿಯ ಲಿಖಿತ consent ಅವಶ್ಯಕವಿರುತ್ತದೆ. ಆದರೆ ಅಂತಹ ಅರ್ಜಿದಾರರು ರದ್ದುಗೊಳಿಸಲು (ರಿಮಾಂಡ್‌ಗೆ) ಒಪ್ಪಿಗೆ ನೀಡುತ್ತಿಲ್ಲ ಎಂದು ಪರಿಶೀಲನಾ ಸಭೆಗಳಲ್ಲಿ ಅನುಷ್ಠಾನಾಧಿಕಾರಿಗಳು ತಿಳಿಸಿರುತ್ತಾರೆ. ಇದರಿಂದ ಗ್ರಾಮ ಪಂಚಾಯಿತಿ ಅಧಿಕಾರಿಗಳು ರದ್ದುಗೊಳಿಸಲು ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ ಮತ್ತು ಮುಂದಿನ (next in que) ವಸತಿರಹಿತರಿಗೆ ಮಂಜೂರಾತಿಯನ್ನು ನೀಡಲಾಗುತ್ತಿಲ್ಲ. ಆದ್ದರಿಂದ, ಪಿಎಮ್ಎವೈ ಗ್ರಾಮೀಣ ಯೋಜನೆಯಡಿ ಫಲಾನುಭವಿಗಳ ಆಯ್ಕೆ ಪ್ರಗತಿ ಕಡಿಮೆಯಿರುತ್ತದೆ. |

| | | |
|---|---|---|
| | | ಮುಂದುವರೆದು, ಫಲಾನುಭವಿಗಳನ್ನು 2018 ರ ಪಟ್ಟಿಯಿಂದ ಆಯ್ಕೆ ಮಾಡಬೇಕಾಗಿದ್ದು, ಹೊಸ ವಸತಿರಹಿತರನ್ನು ಸೇರ್ಪಡಿಸಲು ಅವಕಾಶವಿರುವುದಿಲ್ಲ.<br><br>2025-26ನೇ ಸಾಲಿಗೆ ಹಿಂದಿನ ಶ್ರೇಣಿಯ ಮನೆಗಳನ್ನು ಒಳಗೊಂಡಂತೆ 1.50ಲಕ್ಷ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಸದರಿ ಗುರಿಗೆ ಎದುರಾಗಿ ಅಕ್ಟೋಬರ್ 2025ರ ಅಂತ್ಯಕ್ಕೆ ಒಟ್ಟು 61230 ಮನೆಗಳನ್ನು ಪೂರ್ಣಗೊಳಿಸಲು ಗುರಿಯನ್ನು ಹೊಂದಲಾಗಿದ್ದು, ಸದರಿ ಗುರಿಗೆ ಎದುರಾಗಿ ಒಟ್ಟು 39850 ಮನೆಗಳನ್ನು ಪೂರ್ಣಗೊಳಿಸಲಾಗಿರುತ್ತವೆ. |

ಸಂಖ್ಯೆ: ವಇ 510 ಹೆಚ್‌ಎಎಂ 2025

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

ಅನುಬಂಧ-1-LCQ-334

| District | Rural | | Urban | | Houseless Total |
|---|---|---|---|---|---|
| | Siteless | Houseless | Sitelss | Houseless | |
| Bagalkot | 31136 | 57696 | 15762 | 20582 | 125176 |
| Ballari | 18027 | 27897 | 414753 | 3309 | 463986 |
| Belagavi | 19004 | 188957 | 13518 | 4341 | 225820 |
| Bengaluru Rural | 25536 | 9864 | 23391 | 28262 | 87053 |
| Bengaluru Urban | 40501 | 6610 | 39913 | 11463 | 98487 |
| Bidar | 4495 | 83168 | 19384 | 15932 | 122979 |
| Chamarajanagar | 37149 | 46111 | 27824 | 34824 | 145908 |
| Chikkaballapur | 27509 | 35529 | 10064 | 5047 | 78149 |
| Chikkamagaluru | 33286 | 23062 | 16536 | 3396 | 76280 |
| Chitradurga | 27456 | 61912 | 13809 | 1705 | 104882 |
| DakshinaKannada | 30956 | 16003 | 27755 | 7705 | 82419 |
| Davanagere | 24694 | 37930 | 10100 | 3741 | 76465 |
| Dharwad | 15469 | 61562 | 38589 | 6272 | 121892 |
| Gadag | 26554 | 44578 | 34412 | 11388 | 116932 |
| Hassan | 8180 | 52223 | 17359 | 16899 | 94661 |
| Haveri | 14965 | 65249 | 31614 | 16495 | 128323 |
| Kalaburagi | 4607 | 148698 | 19880 | 3638 | 176823 |
| Kodagu | 16210 | 8490 | 15568 | 6877 | 47145 |
| Kolar | 10124 | 35338 | 3120 | 1180 | 49762 |
| Koppal | 15277 | 49203 | 21556 | 3768 | 89804 |
| Mandya | 41172 | 87284 | 19231 | 11879 | 159566 |
| Mysuru | 40429 | 69989 | 7337 | 2671 | 120426 |
| Raichur | 16878 | 115085 | 59884 | 19552 | 211399 |
| Ramanagara | 18629 | 26902 | 8885 | 14166 | 68582 |
| Shivamogga | 31489 | 38406 | 22126 | 6151 | 98172 |
| Tumakuru | 30138 | 65233 | 35028 | 9037 | 139436 |
| Udupi | 31970 | 13814 | 38465 | 4693 | 88942 |
| UttaraKannada | 26423 | 26479 | 1071 | 1946 | 55919 |
| Vijayanagara | 13220 | 50422 | 8111 | 4610 | 76363 |
| Vijayapura | 13945 | 92518 | 11369 | 10853 | 128685 |
| Yadgiri | 8548 | 68734 | 1243 | 9805 | 88330 |
| **Total** | **703976** | **1714946** | **1027657** | **302187** | **3748766** |

| Scheme | Series | Approved |
|---|---|---|
| Basava Housing Scheme | 2021-2022 | 237513 |
| Basava Housing Scheme | 2022-2023 | 57446 |
| Basava Housing Scheme | 2024-2025 | 9670 |
| **Basava Housing Scheme Total** | | **304629** |
| Devraj Urs Housing Scheme-Rural | 2020-2021 | 44939 |
| Devraj Urs Housing Scheme-Rural | 2021-2022 | 2556 |
| Devraj Urs Housing Scheme-Rural | 2022-2023 | 869 |
| Devraj Urs Housing Scheme-Rural | 2023-2024 | 62 |
| Devraj Urs Housing Scheme-Rural | 2024-2025 | 8 |
| **Devraj Urs Housing Scheme-Rural Total** | | **48434** |
| Devraj Urs Housing Scheme-Rural (Flood Affected) | 2024-2025 | 2664 |
| Devraj Urs Housing Scheme-Rural (Flood Affected) | 2025-2026 | 524 |
| **Devraj Urs Housing Scheme-Rural (Flood Affected) Total** | | **3188** |
| Devraj Urs Housing Scheme-Urban | 2020-2021 | 398 |
| Devraj Urs Housing Scheme-Urban | 2021-2022 | 123 |
| Devraj Urs Housing Scheme-Urban | 2022-2023 | 4 |
| Devraj Urs Housing Scheme-Urban | 2023-2024 | 5 |
| **Devraj Urs Housing Scheme-Urban Total** | | **530** |
| Devraj Urs Housing Scheme-Urban (Flood Affected) | 2024-2025 | 237 |
| Devraj Urs Housing Scheme-Urban (Flood Affected) | 2025-2026 | 79 |
| **Devraj Urs Housing Scheme-Urban (Flood Affected) Total** | | **316** |
| Dr.B.R Ambedkar Nivas Yojana Rural | 2020-2021 | 219 |
| Dr.B.R Ambedkar Nivas Yojana Rural | 2021-2022 | 81450 |
| Dr.B.R Ambedkar Nivas Yojana Rural | 2022-2023 | 22274 |
| Dr.B.R Ambedkar Nivas Yojana Rural | 2024-2025 | 3128 |
| **Dr.B.R Ambedkar Nivas Yojana Rural Total** | | **107071** |
| Dr.B.R Ambedkar Nivas Yojana Urban | 2020-2021 | 20 |
| Dr.B.R Ambedkar Nivas Yojana Urban | 2021-2022 | 8700 |
| Dr.B.R Ambedkar Nivas Yojana Urban | 2022-2023 | 448 |
| **Dr.B.R Ambedkar Nivas Yojana Urban Total** | | **9168** |
| PMAY (U)-Non Convergence | 2020-2021 | 2907 |
| PMAY (U)-Non Convergence | 2021-2022 | 5239 |
| PMAY (U)-Non Convergence | 2023-2024 | 1264 |
| **PMAY (U)-Non Convergence Total** | | **9410** |
| PMAY(G) | 2021-2022 | 78358 |
| PMAY(G) | 2024-2025 | 312040 |
| **PMAY(G) Total** | | **390398** |
| PM-JANMAN | 2023-2024 | 1100 |
| **PM-JANMAN Total** | | **1100** |
| Vajpayee Urban Housing Scheme | 2021-2022 | 22509 |
| Vajpayee Urban Housing Scheme | 2022-2023 | 1673 |
| **Vajpayee Urban Housing Scheme Total** | | **24182** |
| **Grand Total** | | **898426** |